

## ಅಪ್ಪನ ಮಗಳು, ಅಮ್ಮನ ಮಗ!

ಮಗಳು ಅಪ್ಪನ ಹಾಗಿದ್ರೆ, ಮಗ ಅಮ್ಮನ ಹಾಗಿದ್ರೆ ಅದೃಷ್ಟ. ಅಪ್ಪ ಕೇಳೋದು ಮಗಳ ಮಾತು, ಅಮ್ಮನಿಗೆ ಮಗನ ಮಾತು ಪ್ರೀತಿ. ಶಿಸ್ತೂ ಅಷ್ಟೇ– ಮಗ ಪಾಲಿಸೋದು ಅಮ್ಮನ ಆಜ್ಞೆನೇ, ಮಗಳಿಗೆ ಅಪ್ಪನ ಮಾತೂಂದ್ರೆ ಮುಗಿದೇ ಹೋಯ್ತು!

–ಇವೆಲ್ಲ ಎಲ್ಲರಿಗೂ ಅನ್ವಯಿಸುವಂಥದ್ದಲ್ಲ! ಆ ತಕ್ಷಣಕ್ಕೆ ಹಾಗನ್ನಿಸಬಹುದು ಅಥವಾ ಅಪ್ಪನಾಗಲೀ, ಅಮ್ಮನಾಗಲಿ ಮಕ್ಕಳನ್ನು ನಿಭಾಯಿಸುವ, ಅವರಿಗೆ ಮಾದರಿಯಾಗುವ ರೀತಿಗಳಲ್ಲಿ, ಅವರ ವ್ಯಕ್ತಿತ್ವಗಳಲ್ಲಿ ಮಗಳು ಅಪ್ಪನ, ಮಗ ಅಮ್ಮನ ಮಾತು ಕೇಳುವಂತಿರಬಹುದು. ಆದರೆ ಇಲ್ಲಿ ಈ ಪರಿಸ್ಥಿತಿ ಬದಲಾಗುವ, ಅಥವಾ ಮಗಳು –ಮಗ ಯಾರ ಮಾತನ್ನೂ ಕೇಳದಿರುವ ಸಾಧ್ಯತೆಯೂ ಇರಬಹುದು! ಮನೋವಿಜ್ಞಾನದ ಪ್ರಕಾರ environment –temperament misfit– ಅಂದರೆ ಅಪ್ಪ– ಅಮ್ಮನ ವ್ಯಕ್ತಿತ್ವ, ಶಿಸ್ತು ಮಾಡುವ ಶೈಲಿ ಮತ್ತು ಮಗುವಿನ ಸ್ವಭಾವ ಇವು ಹೊಂದದಿದ್ದರೆ ಸಮಸ್ಯೆ ಉದ್ಭವಿಸುತ್ತದೆ. ಆಗ ಹುಡುಗ/ ಹುಡುಗಿ ಯಾರೇ ಆದರೂ ಸಮಸ್ಯೆ ಅಪ್ಪ/ ಅಮ್ಮ ಯಾರೊಡನೆಯೂ ಉದ್ಭವಿಸಬಹುದು.

ಹೆಣ್ಣು ಮಕ್ಕಳು ತಮ್ಮ ಭಾವನಾತ್ಮಕತೆಯ ಬಲದಿಂದ ಯಾವ ವಯಸ್ಸಿನಲ್ಲೂ ಅಪ್ಪ– ಅಮ್ಮ ಇಬ್ಬರ ಜೊತೆಗೂ ಸುಲಭವಾಗಿ ಹೊಂದಿಕೊಳ್ಳುತ್ತಾರೆ. ಆದರೆ ಹುಡುಗರಿಗೆ ಇದು ಸುಲಭವಲ್ಲ. ಅಮ್ಮಂದಿರ ಬಳಿ ಅವರು ಎಷ್ಟೇ 'ಕ್ಲೋಸ್' ಎಂದರೂ ಹದಿಹರೆಯದ ಹುಡುಗರಿಗೆ 'ಅಪ್ಪನ' ಮಾದರಿ ಅವಶ್ಯಕ. 'ಅಮ್ಮ' ಮಗನಿಗೆ ಹೇಗಿರಬೇಕು ಎಂಬ ಬಗ್ಗೆ ಹೇಳಬಹುದು. ಆದರೆ ಅಪ್ಪ ಅದನ್ನು 'ಮಾಡಿ' ತೋರಿಸಬಹುದು! ಅದಕ್ಕೆ ಎಲ್ಲಾ ಅಪ್ಪಂದಿರೂ ಮಾಡಲೇಬೇಕಾದ ಮೂರು ಅಂಶಗಳಿವೆ.

★ ಮಗನೊಡನೆ ಸಮಯ ಕಳೆಯುವುದು, ಆಟವಾಡುವುದು. 'ಅಪ್ಪ ನನ್ನನ್ನು ಪ್ರೀತಿಸುತ್ತಾನೆ' ಎಂಬ ಭಾವನೆ ತರುವ ಸುರಕ್ಷಿತತೆ ಮಕ್ಕಳಿಗೆ ಅಗತ್ಯವಾಗಿ ಬೇಕು.

★ ಮಹಿಳೆಯರನ್ನು ಗೌರವಿಸುವುದು. ಮನೆಯಲ್ಲಿ ಪತ್ನಿಯೊಡನೆ ಮಾತನಾಡುವಾಗ ಇದು ಬಲು ಮುಖ್ಯ. ಮಹಿಳೆ ಹೇಳುವುದನ್ನು ಕೇಳುವುದು, ತನ್ನ ತಪ್ಪಿದ್ದಾಗ ಕ್ಷಮೆ ಕೇಳುವುದು, ಗೌರವಪೂರ್ವಕವಾಗಿ ಮಾತನಾಡುವುದು, ದೌರ್ಜನ್ಯ ನಡೆಸದಿರುವುದು.

★ ದೈಹಿಕವಾದ ಆಟಗಳನ್ನು ಆಡುವುದು, ಆಟದ ಕುಸ್ತಿ, ದಿಂಬುಗಳ ಆಟ, ಇವು ಅಪ್ಪಂದಿರು ಗಂಡು ಮಕ್ಕಳೊಡನೆ ಆಡುವುದು ಉಪಯುಕ್ತ. ಇವು ಅವರ ದೈಹಿಕ ತುಡಿತಗಳನ್ನು ನಿಯಂತ್ರಿಸಲು, ಭಾವನೆಗಳಿಗೆ ಕಡಿವಾಣ ಹಾಕಲು ಸಹಾಯಕ. ಜೊತೆಗೇ ಅಪ್ಪಂದಿರ ಅಪ್ಪುಗೆ, ಮುತ್ತು ಗಂಡುಮಕ್ಕಳಿಗೂ ಪ್ರೀತಿಯನ್ನೇ ಸಂವಹಿಸುತ್ತದೆ.

ಮಕ್ಕಳ ದೈಹಿಕ ರಕ್ಷಣೆಯ ಬಗೆಗೆ ಅಪ್ಪ– ಅಮ್ಮ ಅಷ್ಟಾಗಿ ಚಿಂತಿಸುವುದಿಲ್ಲ. ಆದರೆ ಚಿಕ್ಕಂದಿನಲ್ಲಿ ಆತನ ಆರೋಗ್ಯದ ಆರೈಕೆ, ಊಟ– ತಿಂಡಿ, ಇವುಗಳ ಬಗ್ಗೆ ತಂದೆ – ತಾಯಿ ವಹಿಸುವ ಎಚ್ಚರಿಕೆ ಬಹಳ. ಹದಿಹರೆಯದಲ್ಲಿ ಅವರ ಸ್ನೇಹಿತರ ಬಗ್ಗೆ ಚಿಂತೆ, ಕುಡಿದರೆ, ಸಿಗರೇಟು ಸೇದಿದರೆ ಇತ್ಯಾದಿ ಕಾಳಜಿಗಳು, ಬೈಕು ಕೊಡಿಸಬೇಕು ಎಂಬ ಆತನ ಹಠ– ಇವೆಲ್ಲವೂ ಗಂಡು ಹೆತ್ತವರನ್ನೂ ಹಣ್ಣು ಮಾಡಲು ಸಾಧ್ಯವಿದೆ.

### ಇಬ್ಬರೂ ದಡ್ಡರಾಗಿರಬಹುದು!

ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕಿ ಹಂಚಿಕೊಂಡ ಅನುಭವ ಇದು. 'ನಾನು ಶಿಕ್ಷಕಿಯಾಗಿ 20 ವರ್ಷಗಳು ಕಳೆದಿವೆ. ನಾನು ನನ್ನ ತರಗತಿಯಲ್ಲಿ ಪ್ರತಿ ವರ್ಷ ಬರುವ ಎರಡನೇ ತರಗತಿಯ ಮಕ್ಕಳನ್ನು ಕುತೂಹಲದಿಂದ ಗಮನಿಸುತ್ತೇನೆ. ಹುಡುಗರು ಮುಖ ನೋಡದೆ, **'eye contact'** ಮಾಡದೆ, ಅವರವರ ಜಾಗದಲ್ಲಿ ಚಡಪಡಿಸತೊಡಗುವುದು; ಹುಡುಗಿಯರು ತಮ್ಮ ತಮ್ಮಲ್ಲಿ ಮಾತನಾಡ ತೊಡಗುವುದು, ಚಿಟ್ಸ್ ಪಾಸ್ ಮಾಡುವುದು ಇವೆರಡೂ ಬೋರ್ ಆಗುವುದನ್ನು ವ್ಯಕ್ತಪಡಿಸುವ ರೀತಿಗಳು. ಇದು ಕೆಟ್ಟ ನಡವಳಿಕೆಗಳು ಎಂದು ನನಗನ್ನಿಸುವುದಿಲ್ಲ. ಈ ಚಿಕ್ಕ ಬಾಲಕರಿಗೆ ಓಡಾಡುವ ಅವಕಾಶ ಕಲ್ಪಿಸುವುದು, ಚಿಕ್ಕ ಹುಡುಗಿಯರಿಗೆ ಫ್ರೀಯಾಗಿ ಮಾತನಾಡಲು ಬಿಡುವುದು ಮಾಡಿದರೆ ಇವೆಲ್ಲ ಕೆಲವೇ ನಿಮಿಷಗಳಲ್ಲಿ ಸರಿಯಾಗುತ್ತದೆ. ಮಕ್ಕಳು ಕಲಿಯುವುದರಲ್ಲಿ ಆಸಕ್ತಿ ತೋರಿಸುತ್ತಾರೆ.'

'ಹುಡುಗ ಅಲ್ವಾ ಕುಳಿತು ಓದಲ್ಲ' ಎಂಬುದು ನಿಜವಲ್ಲ. ಅಪ್ಪ– ಅಮ್ಮಂದಿರ ಮಾದರಿ, ಓದುವುದರಲ್ಲಿ ಅವರು ವಹಿಸುವ ಆಸಕ್ತಿ, ಅವರು ಉಪಯೋಗಿಸುವ ಕಲಿಕೆಯಲ್ಲಿ ಕ್ರಿಯಾಶೀಲ ಪ್ರಯೋಗಗಳು, ಪ್ರಚೋದನೆ ಇವು ಯಾವುದೇ ಮಗುವಿನ ಕಲಿಕೆಯ ಸಾಮರ್ಥ್ಯವನ್ನು ನಿರ್ಧರಿಸುತ್ತವೆ. ಆದರೆ ಅಪ್ಪ– ಅಮ್ಮ ಮತ್ತು ಶಿಕ್ಷಕರು ಗಮನಿಸಬೇಕಾದ ವಿಷಯವೊಂದಿದೆ. ಓದುವ 'ಸಮಸ್ಯೆ'ಯನ್ನು ಹುಡುಗರು ಮತ್ತು ಹುಡುಗಿಯರು ಗ್ರಹಿಸುವ ರೀತಿ ಬೇರೆ ಬೇರೆ.